**ಸಿಸಿ ನಂಃ 1888/2022**

**ಪಿ.ಡಬ್ಲ್ಯೂಃ 01**

**<u>ದಿನಾಂಕಃ 03.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಕೆ.ಜಿ.ಎಸ್., ಆರೋಪಿತನ ಪರ ವಕೀಲರಿಂದ</u>**

ನಾನು ಪಿ ಯು ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ಆರೋಪಿಯು ವ್ಯವಹಾರ ಮಾಡುವ ಪೂರ್ವದಲ್ಲಿ 1 ವರ್ಷದಿಂದ ಪರಿಚಯ. ಆರೋಪಿಯು ನನ್ನ ಸ್ನೇಹಿತ ಪ್ರವೀಣ್ ಕಡೆಯಿಂದ ಪರಿಚಯಸ್ಥ. ಆರೋಪಿಯು ಬೀರೂರಿನಲ್ಲಿ ಪರಿಚಯ ಆಗಿರುತ್ತಾನೆ. ನನಗೂ ಮತ್ತು ಆರೋಪಿಗೂ ಯಾವುದೇ ಪರಿಚಯ ಇಲ್ಲದೇ ಇದ್ದರೂ ಪರಿಚಯಸ್ಥರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಒಂದು ಬಾರಿ ಲೇವಾದೇವಿ ವ್ಯವಹಾರ ನಡೆದಿರುತ್ತದೆ. ನಾನು ಸುಮಾರು 6-7 ವರ್ಷಗಳಿಂದ ಲೇವಾ ದೇವಿ ವ್ಯವಹಾರ ಮಾಡುತ್ತಿದ್ದೇನೆ. ನಾನು ಲೇವಾದೇವಿ ವ್ಯವಹಾರ ನಡೆಸಲು ಲೈಸನ್ಸ್ ಪಡೆದಿರುವುದಿಲ್ಲ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ ಎಂದರೆ ಸ್ವಲ್ಪ ಬರುತ್ತದೆ ಎಂದು ಉತ್ತರಿಸುತ್ತಾರೆ. ನಾನು ಲೇವಾದೇವಿ ವ್ಯವಹಾರ ಹೊರತು ಪಡಿಸಿ ಸೈಟ್ ಗಳನ್ನು ತೋರಿಸುವ ವ್ಯವಹಾರ ಮಾಡುತ್ತೇನೆ. ನನಗೆ ವ್ಯವಸಾಯದಿಂದ ಹಾಗೂ ಸೈಟ್ ಗಳನ್ನು ತೋರಿಸುವ ಮುಖಾಂತರ ಕಮಿಷನ್ ರೂಪದಲ್ಲಿ ಆದಾಯ ಬರುತ್ತದೆ. ಕಮಿಷನ್ ರೂಪದಲ್ಲಿ ಆದಾಯ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ನನಗೆ ಆದಾಯ ತೆರಿಗೆ ಪಾವತಿಸುವಷ್ಟು ದುಡಿಮೆ ಇರುವುದಿಲ್ಲ. ನನಗೆ ವಾರ್ಷಿಕ 50,000/- ಆದಾಯ ಇದ್ದು ಅದು ನಿಗಧಿತವಾಗಿರುವುದಿಲ್ಲ. ನಾನು ಆರೋಪಿಗೆ 4,00,000/- ರೂ ಹಣವನ್ನು ಸಾಲವಾಗಿ ನೀಡಿರುತ್ತೇನೆ. ನಾನು ಸಣ್ಣ ಪುಟ್ಟ ವ್ಯವಹಾರಗಳಿಂದ ಉಳಿತಾಯ ಮಾಡಿದ ಹಣವನ್ನು ಆರೋಪಿಗೆ ಸಾಲವಾಗಿ ನೀಡಿರುತ್ತೇನೆ. ನಾನು ಆರೋಪಿಗೆ ಮನೆಯಿಂದ ಹಾಗೂ ಸ್ನೇಹಿತರ ಬಳಿ ಹಣವನ್ನು ಪಡೆದು ಸಾಲವನ್ನು ನೀಡಿರುತ್ತೇನೆ. ನನ್ನ ಸ್ನೇಹಿತ ಪ್ರಕಾಶ್ ಎಂಬುವರಿಂದ 1,00,000/- ಹಣವನ್ನು ಪಡೆದಿರುತ್ತೇನೆ. ಸದರಿ ಪ್ರಕಾಶ್ ರವರನ್ನು ಸಾಕ್ಷಿಯಾಗಿ ವಿಚಾರಣೆ

ಮಾಡಿಸಬಹುದು ಎಂದರೆ ಸಾಕ್ಷಿಯು ಅವರು ಏಕೆ ವಿಚಾರಣೆಗೆ ಬರಬೇಕು ನಾನು ಹಣವನ್ನು ಕೊಟ್ಟಿದ್ದು ಎಂದು ನುಡಿಯುತ್ತಾರೆ. ನಾನು ಪ್ರಕಾಶ್ ರವರಿಗಂದ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನನಗೆ 4,00,000/- ಹಣವನ್ನು ಸಾಲವಾಗಿ ನೀಡುವ ಆರ್ಥಿಕ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ.

ದಿನಾಂಕ 20.12.2021 ರಂದು ನಾನು ಆರೋಪಿಗೆ ಹಣವನ್ನು ನೀಡಿದ್ದು, ಸದರಿ ದಿನದಂದೇ ಆರೋಪಿ ಚೆಕ್ಕನ್ನು ನೀಡಿರುತ್ತಾರೆ. ಆರೋಪಿಯು ಹಣವನ್ನುನೀಡಿದ 4-5 ದಿನಗಳ ಪೂರ್ವದಲ್ಲಿ ನನ್ನ ಬಳಿ ಹಣವನ್ನು ಕೇಳಿದ್ದರು. ಆರೋಪಿಯು ಎಂದೂ ನನ್ನ ಬಳಿ ಹಣವನ್ನು ಕೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನನ್ನು ಚಳ್ಳಕೆರೆಯಲ್ಲಿ ನೋಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಯಾವ ವಿಚಾರಕ್ಕೆ ಸಾಲವನ್ನು ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಪ್ರವೀಣ್ ರವರ ಸಮ್ಮುಖದಲ್ಲಿ ಪ್ರವೀಣ್ ರವರ ಮನೆಯಲ್ಲಿಯೇ ಹಣವನ್ನು ನೀಡಿರುತ್ತೇನೆ. ಪ್ರವೀಣ್ ರವರು ಆರೋಪಿಗೆ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. 500/- ರೂ ಮುಖ ಬೆಲೆಯ 800 ನೋಟುಗಳನ್ನು ಆರೋಪಿಗೆ ನೀಡಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲೀಗಲ್ ನೋಟೀಸಿನಲ್ಲಿ ಬಡ್ಡಿ ಕೊಡಬೇಕೆಂದು ನಮೂದಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಲೀಗಲ್ ನೋಟೀಸನ್ನು ಜಾರಿ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಆದರೆ ನನಗೆ ಇಂಗ್ಲಿಷ್ ಭಾಷೆಯನ್ನು ಓದಲು ಬರುವುದಿಲ್ಲ. ರೂ. 50,000/- ಮೇಲ್ಪಟ್ಟ ಹಣವನ್ನು ಆರ್.ಟಿ.ಜಿ.ಎಸ್, ನೆಫ್ಟ್ ಮುಖಾಂತರ ವರ್ಗಾವಣೆ ಮಾಡಬೇಕೆಂಬ ನಿಯಮ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರಕರಣ ದಾಖಲಿಸುವ ಮೊದಲು ಆರೋಪಿಯನ್ನು ಒಂದು ಬಾರಿ ಭೇಟಿ ಮಾಡಿರುತ್ತೇನೆ. ನಾನು ಆರೋಪಿಯನ್ನು ಭೇಟಿಯಾಗಿ ಹಣವನ್ನು ವಾಪಾಸ್ಸು ಮಾಡುವಂತೆ ಎಂದೂ ಸಹಾ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

**( ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

C/c ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.